ಯಾವಾಗ ನಿದ್ದೆ ಮಾಡಿದೆ ಎಂದು ಗೊತ್ತಿಲ್ಲದೆಯೇ ನಿದ್ದೆಹೋಗಿ, ಕಣ್ಣು ತೆರೆದಾಗ ಬೆಳಗಾಗಿತ್ತು. ಕೊಟ್ಟಿಗೆಯಲ್ಲಿ ದನಗಳ ಶಬ್ದ, ಕರುಗಳು ನಡುವೆನಡುವೆ ಅಮ್ಮಾ ಎಂದು ಕರೆಯುವ ಕೂಗುಗಳು ಕೇಳಿದವು. "ಇರು, ಇರು... ಸುಮ್ನಿರು. ಸುಮ್ನಿರು. ಬರ್ತೀನಿ" ಎಂದು ಅತ್ತೆಯರು ಗದರಿಸುವ ದನಿ ಕೇಳಿತು. "ಸ್ವಲ್ಪ ತಾಳೆ ಮೀನಾಕ್ಷಿ" ಎಂದು ಹಸುವಿನೊಂದಿಗೆ ಮಾತನಾಡುವ ಅಮ್ಮನ ದನಿಯೂ ಕೇಳಿತು. ಚಟ್ ಎಂದು ಎದ್ದು ತೋಟದ ಹಿಂಬಾಗಕ್ಕೆ ಹೋಗಿ ಉಚ್ಚೆ ಹುಯ್ದು ಹಿಂತಿರುಗುವಾಗ ಮರದ ಕೆಳಗೆ ಕಲ್ಲು ತೊಟ್ಟಿಯ ಮೇಲೆ ಕೆಂಪಾದ ಗೆರೆ ಕಂಡಿತು. ತೊಟ್ಟಿಯವರು ಇರಲಿಲ್ಲ. ನಾನು ವೇಗವಾಗಿ ಹೋಗಿ ಮುಖ ತೊಳೆದುಕೊಂಡು ಹಿಂತಿರುಗಿದಾಗ ಕೊಟ್ಟಿಗೆಯಿಂದ ಅತ್ತೆ ನನ್ನನ್ನು ನೋಡಿ ನಕ್ಕಳು. ಕಿರುಬೆರಳಿಂದ ಹಾಲನ್ನು ಅದ್ದಿ ನನ್ನ ಮೇಲೆ ಚಿಮುಕಿಸಿದಳು. ನಗುತ್ತಲೇ ನಾನು ಲೆಕ್ಕದ ಪುಸ್ತಕಗಳನ್ನು ತೆಗೆದುಕೊಂಡು ಜಗುಲಿಯ ಬಳಿ ಹೋದೆ.

ವ್ಯಾಪಾರ ಮುಗಿದಮೇಲೆ, ಸ್ನಾನಕ್ಕೆ ಹಿತ್ತಲ ಕಡೆ ಹೋದ ಸಮಯದಲ್ಲಿ ತೊಟ್ಟಿಯವರು ಕೆಲಸದಲ್ಲಿ ತೊಡಗಿದ್ದರು. ಉಳಿ ಚುಕ್ಕೆಚುಕ್ಕೆಯಾಗಿ ಕಲ್ಲಿನ ಮೇಲೆ ಸರಿದಾಡುತ್ತಿತ್ತು. ಸುತ್ತಿಗೆಯ ಶಬ್ದ ಒಂದು ಲಯದಲ್ಲಿ ರಾಗವಾಗಿ ಧ್ವನಿಸಿತು.

"ತೊಟ್ಟಿ ಮಾಡಲು ಎಲ್ಲಿ ಕಲಿತುಕೊಂಡ್ರಿ?" ನಾನು ಅವರ ಬಳಿ ಹೋಗಿ ಕೇಳಿದೆ. ಅವಸರದಿಂದ ಅವರು "ಈ ಕಡೆ ಬನ್ನಿ ಚಿಕ್ಕ ಬುದ್ಧಿ. ಕಲ್ಲೂರು ಕಣ್ಣಿಗೆ ಬೀಳುತ್ತೆ" ಎಂದು ಹೇಳಿ ನಾನು ಜರುಗಿದ ಮೇಲೆ, ಕರೆ ಹಿಡಿದ ಹಲ್ಲುಗಳು ಕಾಣುವಂತೆ ನಗುತ್ತಾ ನನ್ನ ನೋಡಿದರು. ನಂತರ "ಇದಕ್ಕೆಲ್ಲ ಶಾಲೆ ಇದೆಯೇನು? ನಮ್ಮ ಅಜ್ಜ, ಮುತ್ತಜ್ಜನ ಕಾಲದಿಂದಲೂ ಇದೇ ನಮ್ಮ ಕಸುಬು. ನಮ್ಮ ತಾತನಿಂದ ನನ್ನ ಅಪ್ಪ ಕಲಿತುಕೊಂಡರು. ಅವರಿಂದ ನಾನು ಕಲಿತುಕೊಂಡೆ" ಎಂದರು.

"ನಿಮ್ಮಿಂದ ಯಾರು ಕಲಿತುಕೊಳ್ತಾರೆ?"

"ಈ ಕಸುಬೆ ಬೇಡ ಸ್ವಾಮಿ. ಇದನ್ನ ಕಷ್ಟಪಟ್ಟು ಯಾರೂ ಕಲಿತುಕೊಳ್ಳೋದು ಬೇಡ. ಇದು ನನ್ನೊಂದಿಗೆ ಮುಗಿದುಹೋಗಲಿ..."

"ಯಾಕೆ ನಿಮಗೆ ಮಕ್ಕಳಿಲ್ಲವಾ?"

"ಹೆಂಡತಿಯೇ ಇಲ್ಲ. ಅಂದ ಮೇಲೆ ಮಕ್ಕಳಿಗೆ ನಾನು ಎಲ್ಲಿಗೆ ಹೋಗೋದು ಸ್ವಾಮಿ?"

ಚಿಕ್ಕ ಉಳಿಯನ್ನು ಪಕ್ಕಕ್ಕಿಟ್ಟು, ಅಳತೆಯಲ್ಲಿ ಸ್ವಲ್ಪ ದೊಡ್ಡ ಉಳಿಯನ್ನು ತೆಗೆದುಕೊಂಡು ಕಲ್ಲಿನ ಒಂದು ಮೂಲೆಯಲ್ಲಿಟ್ಟು ಮೆಲ್ಲಗೆ ಹೊಡೆದರು. ನಂತರ ಅದನ್ನು ನೇರವಾಗಿ ಗೆರೆಯಾಗಿ ಎಳೆದುಕೊಂಡೇ ಹೋದರು.

"ಕಲ್ಲನ್ನು ಕೆತ್ತಿ ಕೆತ್ತಿ ತೊಟ್ಟಿ ಮಾಡೋದು ನಿಜವಾಗಲೂ ದೊಡ್ಡ ವಿದ್ಯೆನೇ" ಎಂದು ಮತ್ತೆ ಮಾತನ್ನು ಮುಂದುವರಿಸಿದೆ ನಾನು.

"ಕಲ್ಲಿಂದ ದೇವರ ಮೂರ್ತಿ ಮಾಡೋದು, ಪುರುಷರ ಶಿಲ್ಪ ಮಾಡೋದು, ಸ್ತ್ರೀ ಶಿಲ್ಪ ಮಾಡೋದು, ಆನೆ ಸಿಂಹ ಮೂರ್ತಿಗಳನ್ನು ಮಾಡೋದು, ಮಂಟಪ ಮಾಡೋದು ಎಲ್ಲವೂ ದೊಡ್ಡ ವಿದ್ಯೆ. ರುಬ್ಬೋ ಕಲ್ಲು, ಒರಳುಕಲ್ಲು, ತೊಟ್ಟಿ ಮಾಡೋದೆಲ್ಲಾ ಚಿಕ್ಕ ಚಿಕ್ಕ ವಿದ್ಯೆ ಸ್ವಾಮಿ..." ಒಂದು ಕ್ಷಣ ಮಾತನ್ನು ನಿಲ್ಲಿಸಿ ತಲೆ ಎತ್ತಿ ನನ್ನನ್ನು ನೋಡಿ ಮತ್ತೆ ಮುಂದುವರೆಸಿದರು. "ಆದರೆ ಕಲ್ಲನ್ನು ಮುಟ್ಟಿ ಏನು ಮಾಡಿದರೂ ಸರಿ, ಮನಸ್ಸಿನೊಳಗೆ ತಣ್ಣಗೆ ಗಾಳಿ ಬೀಸೋ ಥರಾ ಇರುತ್ತೆ. ಮಳೆ ಬಂದ ಹಾಗೆ ಇರುತ್ತೆ. ಏನನ್ನೂ ಮಾಡದಿದ್ದರೆ ಏನೋ ಸಂಕಟವಾದಂತೆ ಅನಿಸುತ್ತೆ..."

ಜೀರಿಗೆ ಮಿಠಾಯಿಯಂತೆ ಚಿಕ್ಕಚಿಕ್ಕ ಚೂರುಗಳು ಕಲ್ಲಿನ ಸುತ್ತ ಚದುರಿ ಬಿದ್ದಿರುವುದನ್ನು ನೋಡಿದೆ. ಕೈತುಂಬ ಅದನ್ನು ಬಾಚಿ ತೆಗೆದುಕೊಂಡು ಹೋಗಿ ಸ್ನೇಹಿತರಿಗೆ ತೋರಿಸಬೇಕೆಂದು ಅನಿಸಿತು.